ಎಸ್.ಸಿ.ನಂ.137/2020
ಚಾ.ಸಾ.5/ಪ್ರಾ.ಸಾ.2

<u>ತಾಃ**10.07.2023** ರಂದು ಸಾಕ್ಷಿಯನ್ನು ಪುನಃ ಕರೆದು ಪ್ರಮಾಣ ವಚನ ಮಾಡಿಸಲಾಯಿತು.</u>

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ.ಬಿ ಎಮ್ ಪಿ ವಕೀಲರಿಂದಃ</u>

ಚಾಸಾ.7 ರವರು ನನಗೆ 7-8 ವರ್ಷದಿಂದ ಪರಿಚಯ ಇರುತ್ತಾರೆ. ಲಗ್ಗೆರೆಯಲ್ಲಿ ಇರುವ ಟೀ ಅಂಗಡಿಯಲ್ಲಿ ಚಾಸಾ.7 ರವರು ಆಗಾಗ ಬರುತ್ತಿದ್ದ ಕಾರಣ ಅವರ ಪರಿಚಯ ಆಗಿರುತ್ತದೆ. ನಾನು ಪ್ರಯಾಣಿಕರ ಆಟೋ ರೀಕ್ಷಾವನ್ನು ಚಲಾಯಿಸುತ್ತೇನೆ. ಚಾಸಾ.7 ರವರು ಏನು ವೃತ್ತಿ ಮಾಡುತ್ತಾರೆ ಎಂದು ನನಗೆ ತಿಳಿದಿಲ್ಲ. ಆದರೆ ಅವರು ಆಗಾಗ ಸಿಗುತ್ತಿದ್ದರು. ಚಾಸಾ.7 ರವರ ಮೊಬೈಲ್ ನಂಬರ್ ನನ್ನ ಬಳಿ ಇಲ್ಲ. ಆದರೆ ಅವರ ಬಳಿ ನನ್ನ ಮೊಬೈಲ್ ನಂಬರ್ ಇರುತ್ತದೆ. ಆಟೋ ಬಾಡಿಗೆಗೆ ಗ್ರಾಹಕರು ಇದ್ದಲ್ಲಿ ತಿಳಿಸುವಂತೆ ನಾನೇ ನನ್ನ ಮೊಬೈಲ್ ನಂಬರ್ ಅನ್ನು ಚಾಸಾ.7 ರವರಿಗೆ ನೀಡಿದ್ದೇನು. ನನ್ನ ಹಾಗೂ ಚಾಸಾ.7 ರವರ ನಡುವೆ ವೈಯಕ್ತಿಕ ವಿಚಾರಗಳನ್ನು ತಿಳಿಸುವಷ್ಟು ಆತ್ಮೀಯತೆ ಇರಲಿಲ್ಲ. ಚಾಸಾ.7 ರವರಿಗೆ ನನ್ನ ಭಾವನ ಪರಿಚಯ ಇರುತ್ತದೆಯೋ ಇಲ್ಲವೋ ಎಂದು ನನಗೆ ತಿಳಿದಿಲ್ಲ. ಆರೋಪಿತರಿಗೂ ಕೆಂಪೇಗೌಡರಿಗೂ ಯಾವ ರೀತಿ ಪರಿಚಯ ಹಾಗೂ ಅವರಿಬ್ಬರಿಗೂ ಪರಿಚಯ ಇರುತ್ತದೆಯೋ ಇಲ್ಲವೋ ಎಂದು ನನಗೆ ತಿಳಿದಿಲ್ಲ.

2. ಚಾಸಾ.7 ರವರಿಗೂ ಆರೋಪಿತರಿಗೂ ಪರಸ್ಪರ ಪರಿಚಯ ಇಲ್ಲ ಎಂದರೆ ನನಗೆ ತಿಳಿದಿಲ್ಲ. ಸಾಕ್ಷಿದಾರರಿಗೆ "ದಿಃ17.02.2020 ರಂದು ಬೆಳಿಗ್ಗೆ 9.30

ಕ್ಕೆ...................ಹೆರೋಹಳ್ಳಿಗೆ ಹೋಗಿರುತ್ತೇವೆ" ಎಂದು ಹೇಳಿದ ವಿಚಾರ ಎಲ್ಲಾ ಸುಳ್ಳಾಗಿರುತ್ತದೆ ಎಂದರೆ ಸರಿಯಲ್ಲ. ಚಾಸಾ.7 ರವರು ನನಗೆ ಮಾಡಲು ಉಪಯೋಗಿಸಿದ ಫೋನ್ ನಂಬರ್ ನನಗೆ ತಿಳಿದಿಲ್ಲ. ಇದಾದ ಮೇಲೆ ನಾನು ಪುನಃ ಚಾಸಾ.7 ರವರಿಗೆ ಫೋನ್ ಮಾಡಿರುವುದಿಲ್ಲ. ಇದೇ ಕಾರಣಕ್ಕಾಗಿ ನನಗೆ ಚಾಸಾ.7 ರವರ ಮೊಬೈಲ್ ನಂಬರ್ ಹೇಳಲು ಆಗಿರುವುದಿಲ್ಲ ಎಂದರೆ ಸರಿ.

3. ನನ್ನ ಭಾವನನ್ನು ಯಾರೋ ಕರೆದುಕೊಂಡು ಹೋಗಿರುದಾಗಿ ಚಾಸಾ.7 ರವರು ತಿಳಿಸಿದ ಕೂಡಲೇ ನಾನು ಹೋಗಿ ಠಾಣೆಗೆ ದೂರು ದಾಖಲಿಸಿಲ್ಲ. ಚಾಸಾ.7 ರವರು ನನಗೆ ಫೋನ್ ಮಾಡಿದಾಗ ನಾನು ಮಾಚೋಹಳ್ಳಿಯಲ್ಲಿ ಇದ್ದೇನು. ನಂತರ ನಾನು ಹಾಗೂ ಚಾಸಾ.7 ರವರು ಹೆರೋಹಳ್ಳಿ ಮಾಗಡಿ ಮುಖ್ಯ ರಸ್ತೆಯಲ್ಲಿ ಹೋಗಿ ಅಲ್ಲಿಂದ ನಡೆದುಕೊಂಡು ಮುಂದಕ್ಕೆ ಹೋಗಿರುವುದಾಗಿ ಸುಳ್ಳು ನುಡಿದಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರು ನನ್ನ ಭಾವ ಹಾಗೂ ಚಾಸಾ.1 ಮತ್ತು 2 ರವರಿಗೆ ಹೊಡೆದಿರುವುದನ್ನು ನಾನು ಸ್ವತಃ ನೋಡಿರುವುದಿಲ್ಲ. ಸದರಿ ಸ್ಥಳದಲ್ಲಿ ನನ್ನ ಭಾವನಿಗೆ ಹೊಡೆದ 5 ಜನ ವ್ಯಕ್ತಿಗಳು ಹಾಜರಿದ್ದರು ಎಂದು ನಾನು ಸುಳ್ಳು ನುಡಿದಿದ್ದು ಸದರಿ ಸ್ಥಳಕ್ಕೆ ನಾನು ಹೋಗಿರಲಿಲ್ಲ, ಅಲ್ಲಿ ಆರೋಪಿತರು ಯಾರು ಇರಲಿಲ್ಲ ಎಂದರೆ ಸರಿಯಲ್ಲ. ಸದರಿ ಸ್ಥಳದಿಂದ ನಾನು ಮನೆಗೆ ವಾಪಸ್ ಬಂದಿದ್ದು ಚಾಸಾ.7 ರವರು ಎಲ್ಲಿಗೆ ಹೋದರು ಎಂದು ನನಗೆ ತಿಳಿದಿಲ್ಲ. ಇಷ್ಟೆಲ್ಲಾ ತಿಳಿದು ಬಂದ ನಂತರವೂ ಸಹ ದೂರು ಕೊಡುವ ಸಾಧ್ಯತೆ ಇದ್ದರೂ ಸಹ ನಾನು ದೂರು ಕೊಡಲು ಪ್ರಯತ್ನಿಸಿಲ್ಲ ಎಂದರೆ ಸರಿ.

4. ನಾನು ಹೇಳಿದಂತೆ ಆ ರೀತಿ ಘಟನೆ ಯಾವುದು ನಡೆಯದೇ ಇದ್ದ ಕಾರಣ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲಿಲ್ಲ ಎಂದರೆ ಸರಿಯಲ್ಲ. ನಾನು ಹೋಗಿರುತ್ತೇನೆ ಎಂದು ಹೇಳುವ ಸ್ಥಳ ಮಾಗಡಿ ಮುಖ್ಯ ರಸಸ್ತೆಯಿಂದ 500 ಮಿಲಟರ್ ದೂರ ಇರುತ್ತದೆ. ಸದರಿ ಸ್ಥಳದಲ್ಲಿ ಬ್ಯಾಡರಹಳ್ಳಿ ಪೊಲೀಸ್ ಠಾಣೆಗೆ ಇರುತ್ತದೆ ಎಂದರೆ ಸರಿ. ಸದರಿ ಸ್ಥಳ ಬ್ಯಾಡರಹಳ್ಳಿ ಪೊಲೀಸ್ ಠಾಣೆಯ ಹಿಂಭಾಗಕ್ಕೆ ಬರುತ್ತದೆ ಎಂದರೆ ಸರಿ. ಆದರೆ ಸ್ವಲ್ಪ ದೂರ ಇರುತ್ತದೆ. ಪೊಲೀಸ್ ಠಾಣೆಯ ಹಿಂಭಾಗದಲ್ಲಿ ಆ ರೀತಿ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ನಾನು ಸದರಿ ಸ್ಥಳದಲ್ಲಿ ಆರೋಪಿತರನ್ನು ನೋಡಿಲ್ಲ, ಅವರನ್ನು ಗುರುತಿಸಲು ಆಗುವುದಿಲ್ಲ ಎಂದರೆ ಸರಿಯಲ್ಲ. ನಾನು ಸದರಿ ಸ್ಥಳಕ್ಕೆ ಹೋದಾಗ ಕತ್ತಲೆ ಆವರಿಸಿದ್ದ ಕಾರಣ ಆರೋಪಿತರು ಯಾವ ಬಣ್ಣದ ಬಟ್ಟೆ ಧರಿಸಿದ್ದರು ಎಂದು ಹೇಳಲು ಆಗುವುದಿಲ್ಲ. ನಾನು ಆ ಸ್ಥಳಕ್ಕೆ ಹೋದಾಗ ರಾತ್ರಿ 7.00 ಗಂಟೆ ಆಗಿತ್ತು. ಕತ್ತಲೆಯಾಗಿದ್ದ ಕಾರಣ ಸ್ಥಳದಲ್ಲಿ ಇದ್ದ ವ್ಯಕ್ತಿಗಳ ಮುಖ ಸರಿಯಾಗಿ ಕಾಣಿಸಿಲ್ಲ.

**ಈ ಹಂತದಲ್ಲಿ ಮಧ್ಯಾಹ್ನ 2.00 ಗಂಟೆ ಸಮಯ ಆದ ಕಾರಣ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.**

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.)

ಓ. ಹೇ. ಕೇ. ಸ. ಸಹಿ ಮಾಡಿದ್ದಾರೆ.

(ಎಸ್.ಶ್ರೀಧರ)
9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.

<u>ಸಾಕ್ಷಿಯನ್ನು ಪುನಃ ಕರೆದು ಪ್ರಮಾಣ ವಚನ ಮಾಡಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ.ಬಿ ಎಮ್ ಪಿ ವಕೀಲರಿಂದಃ</u>

5. ನಾವು ಆ ದಿನ ರಾತ್ರಿ 9.00 ಅಥವಾ 9.30 ರ ಸಮಯದಲ್ಲಿ ನನ್ನ ಭಾವನನ್ನು ಹುಡುಕಲು ಪೋಲೀಸ್ ಠಾಣೆಯ ಹಿಂಭಾಗದ ಜಾಗಕ್ಕೆ ಹೋಗಿದ್ದು ಅದು 2020 ನೇ ಇಸವಿ 17 ನೇ ತಾರೀಖು ಆಗಿದ್ದು ತಿಂಗಳು ನೆನಪಿಲ್ಲ. ಆ ಸಮಯದಲ್ಲಿ ನನ್ನ ಜೊತೆ ಚಾಸಾ.3, ನನ್ನ ಭಾವನ ತಾಯಿ ಹಾಗೂ ಚಾಸಾ.8 ರವರು ಬಂದಿದ್ದರು. ನಾವೆಲ್ಲರೂ ಒಂದು ಆಟೋದಲ್ಲಿ ಹೋಗಿದ್ದೇವು. ನಮ್ಮ ಭಾವನ ಪತ್ತೆ ಆಗದಿದ್ದ ಕಾರಣ ನಾವು ನಮ್ಮ ಮನೆಗೆ ವಾಪಸ್ ಬಂದಿದ್ದು ನನ್ನ ಜೊತೆ ಬಂದವರು ಅವರ ಮನೆಗೆ ವಾಪಸ್ ಹೋಗಿರುತ್ತಾರೆ. ನಾವು ಆ ದಿನ ನಮ್ಮ ಭಾವನನ್ನು ಹುಡುಕಲು ಪೋಲೀಸ್ ಠಾಣೆ ಇರುವ ರಸ್ತೆಯಲ್ಲಿ ಹೋಗಿ ಅದೇ ರಸ್ತೆಯಲ್ಲಿ ವಾಪಸ್ ಬಂದಿರುತ್ತೇವೆ. ನನ್ನ ಭಾವ ಕಾಣೆಯಾಗಿ ಮೂರು ದಿವಸ ಕಳೆದಿದ್ದರೂ ಸಹ ನಾವು ಪೋಲೀಸ್ ಠಾಣೆಗೆ ದೂರು ದಾಖಲಿಸಲಿಲ್ಲ ಎಂದರೆ ಸರಿ. ನಮಗೆ ದೂರು ಕೊಡುವ ಸಾಧ್ಯತೆ ಇದ್ದರೂ ಸಹ ಉದ್ದೇಶಪೂರ್ವಕವಾಗಿ ದೂರು ಕೊಡಲು ಪ್ರಯತ್ನಿಸಲಿಲ್ಲ ಎಂದರೆ ಸಾಕ್ಷಿಯೂ ನಮ್ಮ ಭಾವ ಬರಬಹುದು ಎಂಬ ಉದ್ದೇಶಕ್ಕಾಗಿ ದೂರು ಕೊಡಲಿಲ್ಲ ಎಂದು ಉತ್ತರಿಸುತ್ತಾರೆ.

6. ನಮ್ಮ ಭಾವನಿಗೆ ಸುಮಾರು ವರ್ಷದಿಂದ ಮದ್ಯಪಾನದ ಚಟ ಇರುತ್ತದೆ. ನನ್ನ ಭಾವ ಪ್ರತಿದಿನ ಅಂದಾಜು ಒಂದೂವರೆ ಕ್ವಾಟರ್ ಮದ್ಯಪಾನ ಮಾಡುತ್ತಿದ್ದರು. ಕುಡಿತದ ಚಟದಿಂದ ನಮ್ಮ ಭಾವ ಮನೆಗೆ ಸರಿಯಾಗಿ ವಾಪಸ್ ಬರದೇ ಅಲ್ಲಿ ಇಲ್ಲಿ

ಹೋಗುತ್ತಿದ್ದ ವಿಚಾರ ನನಗೆ ತಿಳಿದಿಲ್ಲ. ನನ್ನ ಭಾವ ಮದ್ಯಪಾನ ಮಾಡಿ ರಸ್ತೆಯಲ್ಲಿ ಬಿದ್ದು ಮಾರನೇ ದಿನ ಬೆಳಗ್ಗೆ ಮನೆಗೆ ವಾಪಸ್ ಬರುತ್ತಿದ್ದರು ಎಂದರೆ ಸಾಕ್ಷಿಯು ಇದರ ಬಗ್ಗೆ ನನಗೆ ಯಾರು ಹೇಳಲಿಲ್ಲ ಎಂದು ನುಡಿಯುತ್ತಾರೆ. ಇದೇ ಕಾರಣಕ್ಕಾಗಿ ನನ್ನ ಭಾವ ಕಾಣೆ ಆಗಿರುವುದಾಗಿ ನಾವು ಪೋಲೀಸ್ ಠಾಣೆಗೆ ದೂರು ಸಲ್ಲಿಸಿರಲಿಲ್ಲ ಎಂದರೆ ಸರಿ.

7. ಮಾರನೇ ದಿನ ಬೆಳಗ್ಗೆ ನಾವು ಸದರಿ ಸ್ಥಳಕ್ಕೆ ಹೋಗಿದ್ದು, ಅದು ಯಾವ ದಿನಾಂಕ ಎಂದು ನನಗೆ ಹೇಳಲು ಆಗುವುದಿಲ್ಲ. ನನಗೆ ಭಾವನ ಮೃತದೇಹವನ್ನು ನಾವು ಬೆಳಗ್ಗೆ 10.30 ರ ಸಮಯದಲ್ಲಿ ನೋಡಿರುತ್ತೇವೆ. ನನ್ನ ಭಾವನ ಮೃತದೇಹದ ಮೇಲೆ ಗಾಯ ಆಗಿರುವುದನ್ನು ನಾನು ಹಾಗೂ ಪೋಲೀಸರು ನೋಡಿರುತ್ತೇವೆ. ಪೋಲೀಸರು ನಮ್ಮ ಭಾವನ ಮೃತದೇಹವನ್ನು ತೋರಿಸಿ ಇಂತಿಂತ ಜಾಗದಲ್ಲಿ ಗಾಯ ಆಗಿರುತ್ತದೆ ಎಂದು ಹೇಳಿರುತ್ತಾರಾ ಎಂದರೆ ಸಾಕ್ಷಿ ನಾನೇ ನೋಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ನೋಡಿದಾಗ ಮೃತದೇಹ ಮಕಾಡೆ ಮಲಗಿದ್ದು ಆ ಸಮಯದಲ್ಲಿ ಮೃತದೇಹದ ಮೇಲೆ ಗಾಯಗಳು ಆಗಿರುವುದು ಕಂಡು ಬಂದಿದ್ದು ಅದನ್ನು ಪೋಲೀಸರಿಗೆ ತೋರಿಸಿರುತ್ತೇನೆ. ಸ್ಥಳಕ್ಕೆ ಪೋಲೀಸ್ ಅಧಿಕಾರಿಯ ಜೊತೆ 7-8 ಜನ ಪೋಲೀಸರು ಬಂದಿದ್ದರು. ನಾನು ಸ್ಥಳಕ್ಕೆ ಹೋಗುವ ಸಮಯದಲ್ಲಿ ಪೋಲೀಸರನ್ನು ಕರೆದುಕೊಂಡು ಹೋಗಿದ್ದೇನು.

8. ನಾನು ಸದರಿ ಸ್ಥಳದಲ್ಲಿ ಮೃತದೇಹವನ್ನು ನೋಡಿಲ್ಲ, ನನ್ನ ಜೊತೆ

ಎಸ್.ಸಿ.ನಂ.137/2020
ಚಾ.ಸಾ.5/ಪ್ರಾ.ಸಾ.2

ಪೋಲೀಸರನ್ನು ಕರೆದುಕೊಂಡು ಹೋಗದೇ ಇದ್ದರೂ ಸಹ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಪೊಲೀಸರು ನನ್ನನ್ನು ಠಾಣೆಗೆ ಕರೆಸಿ ಆರೋಪಿತರನ್ನು ತೋರಿಸಿ ಅವರೇ ಕೊಲೆ ಮಾಡಿದ್ದು, ಆರೋಪಿತರನ್ನು ಬಂಧಿಸಿರುವುದಾಗಿ ನನಗೆ ತೋರಿಸಿದರು ಎಂದರೆ ಸರಿ. ನನ್ನ ಭಾವ ಮೃತಪಡುವುದಕ್ಕೂ ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲದೇ ಇದ್ದರೂ ಸಹ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಕಾನೂನು ಬಾಹಿರವಾಗಿ ಹಣ ಮಾಡುವ ಉದ್ದೇಶದಿಂದ ಸುಳ್ಳು ದೂರು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.)

ಓ. ಹೇ. ಕೇ. ಸ. ಸಹಿ ಮಾಡಿದ್ದಾರೆ.

(ಎಸ್.ಶ್ರೀಧರ)
9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.